KARNATAKA REGIONAL ORGANISATION FOR SOCIAL SERVICE
KROSS

ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 33 ಜನವರಿ - ಮಾರ್ಚ್ 2016

## ಮಹಿಳಾ ಸಮಾನತೆಯತ್ತ ದಿಟ್ಟ ಹೆಜ್ಜೆಗಳು



ಮಹಿಳಾ
ಸಮಾನತೆಗಾಗಿ
ಇನ್ನೆಷ್ಟು ಕಾಲ
ಕಾಯಬೇಕು?

**ಕುಟುಂಬದಿಂದ ವಿಶ್ವದವರೆಗೆ ಲಿಂಗ ಸಮಾನತೆಗಾಗಿ ಹೋರಾಡೋಣ**



ಮುಖ್ಯ ಸಂಪಾದಕರು
ಫಾ. ಸೆಬಾಸ್ಟಿಯನ್ ಫರ್ನಾಂಡಿಸ್

## ಒಳ ಪುಟಗಳಲ್ಲಿ :

**ಮಹಿಳಾ ಸಮಾನತೆಯೆಡೆಗೆ ಒಂದು ಹೆಜ್ಜೆ**
ಶ್ರೀ ವರ್ಗೀಸ್ ಜಿ.ಎಂ.

**ಅಲೊವೆರ**
ಡಾ. ರಾಜಶೇಖರ್

**ಹೈದ್ರಾಬಾದ್ ಕರ್ನಾಟಕಕ್ಕೆ ವರದಾನವಾಗಲಿರುವ ಪರಿಚ್ಛೇದ 371 (ಜೆ)**

**ವಾರ್ತಾ ವಿಶೇಷ**
ಶ್ರೀ ಕ್ಲೆಮೆಂಟ್ ಫರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್

**ಮುಖಪುಟ ವಿನ್ಯಾಸ**
ಅನೂಷ ಗ್ರಾಫಿಕ್ಸ್

# ಓದುಗರೊಂದಿಗೆ ಕ್ಷಣ ಹೊತ್ತು......



**ಸಹೃದಯ ಓದುಗರೇ ...**
**ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದ ತಾಯಿ**
**ಪೆಣ್ಣಲ್ಲವೆ ಪೊರೆದವಳು**
**ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು**
**ಕಣ್ಣು ಕಾಣದ ಗಾವಿಲರು**

ಗಂಡು ಹೆಣ್ಣೆಂಬ ತಾರತಮ್ಯವೇಕೆ ಇಬ್ಬರೂ ಸಮಾನ ಹಕ್ಕುಳ್ಳುವರೆಂಬ ದಿಟ್ಟ ನಿಲುವು ತೋರಿದ ಕನ್ನಡದ ಆದರ್ಶ ಮಹಿಳೆ ಸಂಚಿಹೊನ್ನಮ್ಮ. 16ನೇ ಶತಮಾನದಲ್ಲೇ ಹೊನ್ನಮ್ಮ ತಮ್ಮ **ಹದಿಬದೆಯ ಧರ್ಮ** ಎಂಬ ಕವನದ ಮೂಲಕ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನದ ಬಗ್ಗೆ ಪುರುಷವರ್ಗದ ಕಣ್ಣುತೆರೆಸಿದ್ದಾರೆ.

ಮಹಾತ್ಮಾ ಗಾಂಧೀಜಿಯವರು 'ಹೆಣ್ಣು ಮಗಳೊಬ್ಬಳು ಮಧ್ಯರಾತ್ರಿಯಲ್ಲಿ ಸ್ವತಂತ್ರ್ಯವಾಗಿ ನಡೆದು ಬರುವುದೇ ಸ್ವಾತಂತ್ರ್ಯ' ಎಂದಿದ್ದಾರೆ.

ಶಿಕ್ಷಣ ಪಡೆಯುವುದು ಹೆಣ್ಣಿನ ಜನ್ಮಸಿದ್ಧ ಹಕ್ಕಾಗಿದೆ. ತಾನು ತನ್ನೊಂದಿಗಿನ ಕುಟುಂಬ ಹಾಗೂ ಸಮಾಜವನ್ನು ಸುಧಾರಣೆಗೊಳಿಸುವ ಪ್ರಕ್ರಿಯೆಯಲ್ಲಿ ಅವಳು ಪಡೆದ ಶಿಕ್ಷಣ ಅವಳಿಗೆ ಬಲ, ಧೈರ್ಯ, ಸ್ಥೆರ್ಯ ತುಂಬುತ್ತದೆ. ಜೊತೆಗೆ ಸುಸಂಸ್ಕೃತ ಮಹಿಳೆಯನ್ನಾಗಿ ರೂಪಿಸುತ್ತದೆ. ಈ ನಿಟ್ಟಿನಲ್ಲಿ ಪೂರ್ವ ಮತ್ತು ಪಾಶ್ಚಿಮಾತ್ಯ ದಾರ್ಶನಿಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಆದುದರಿಂದಲೇ ಪಾಶ್ಚಮಾತ್ಯ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳಾಗಿ ಹೊರಹೊಮ್ಮಿವೆ.

ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ ಲಿಂಗ ಅಸಮಾನತೆಯ ಸಮಸ್ಯೆ ಬಹಳಷ್ಟು ವ್ಯಾಪಕವಾಗಿ ಕಂಡುಬರುತ್ತದೆ. ಇಲ್ಲಿ ಮಹಿಳೆಯರಿಗೆ ಪುರುಷರಿಗಿಂತಲೂ ಕಡಮೆ ಶಿಕ್ಷಣ ದೊರೆಯುತ್ತದೆ. ಅಷ್ಟೇ ಅಲ್ಲದೆ, ಪ್ರಪಂಚದ ಇತರ ಭಾಗಗಳಲ್ಲಿ ಮಹಿಳೆಯರಿಗೆ ದೊರಕುವ ಉದ್ಯೋಗಾವಕಾಶಗಳಿಗಿಂತ ಕಡಮೆ ಉದ್ಯೋಗಗಳು ಇಲ್ಲಿ ನಮ್ಮ ಮಹಿಳೆಯರಿಗೆ ದೊರಕುವ ಸಂಭವವೇ ಹೆಚ್ಚು. ಅಂತೆಯೆ, ಮೂಲಭೂತ ಮಾನವ ಹಕ್ಕುಗಳು, ಸಂಪನ್ಮೂಲಗಳು, ಆರ್ಥಿಕವಾಗಿ ಬೆಳೆಯುವ ಅವಕಾಶಗಳು ಮತ್ತು ರಾಜಕೀಯ ನೆಲೆಯಲ್ಲಿ ಪಾಲುಗೊಳ್ಳುವ ಹಕ್ಕುಗಳು ಇಂಥ ಹಲವಾರು ವಿಚಾರಗಳಿಗೆ ಸಂಬಂಧಪಟ್ಟಂತೆ ಪ್ರಪಂಚದಾದ್ಯಂತ ಮಹಿಳೆಯರಿಗೆ ದೊರಕುತ್ತಿರುವ ಅವಕಾಶಗಳು ಕಡಮೆಯೆ ಆಗಿದ್ದು ಲಿಂಗ ಅಸಮಾನತೆ ವ್ಯಾಪಕವಾಗಿಯೆ ಕಂಡುಬರುತ್ತಿದೆ.

ಭಾರತ ಸಕಾರ **"ಮಗಳನ್ನು ರಕ್ಷಿಸಿ ಮಗಳನ್ನು ಓದಿಸಿ"** ಎಂಬ ಹೊಸ ಯೋಜನೆ ಪ್ರಾರಂಭಿಸಲಾಗಿದೆ. – ಪ್ರತಿ ಸಾವಿರ ಗಂಡು ಮಕ್ಕಳಿಗೆ ಹೋಲಿಸಿದಲ್ಲಿ ಹೆಣ್ಣು ಮಕ್ಕಳ ಪ್ರಮಾಣ (ಮಗು ಲಿಂಗಾನುಪಾತ) ಅತಿ ಕಡಿಮೆ, ಅಂದರೆ 918ಕ್ಕೆ ಕುಸಿದಿರುವುದು 2011ರ ಜನಗಣತಿಯಲ್ಲಿ ವ್ಯಕ್ತವಾಗಿದೆ. ಹೆಣ್ಣು ಮಕ್ಕಳ ಪ್ರಮಾಣ ಇಷ್ಟು ತೀವ್ರಪ್ರಮಾಣದಲ್ಲಿ ಕುಸಿಯುತ್ತಿರುವುದರಿಂದ ಅವರ ರಕ್ಷಣೆಗೆ ಮುಂದಾಗುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ದೇಶಾದ್ಯಂತ ಸಮೂಹ ತಿಳುವಳಿಕೆ ಆಂದೋಲನ ನಡೆಸಲು ಕೇಂದ್ರ ಸರ್ಕಾರ ಬೇಟಿ ಬಚಾವೊ, ಬೇಟಿ ಪಢಾವೊ (ಬಿಬಿಬಿಪಿ) ಕಾರ್ಯಕ್ರಮ ಹಮ್ಮಿಕೊಂಡಿದೆ; ಹೆಣ್ಣು ಮಕ್ಕಳ ಸಂಖ್ಯೆ ತೀವ್ರ ಕ್ಷೀಣಿಸಿರುವ ದೇಶದ ನೂರು ಜಿಲ್ಲೆಗಳನ್ನು ಗುರುತಿಸಿ, ಬಹು ವಿಧ ಕ್ರಮಗಳ ಮೂಲಕ ಪರಿಸ್ಥಿತಿ ಸುಧಾರಣೆಗೆ ಮುಂದಾಗಿದೆ. 2011 ಜನಗಣತಿ ಪ್ರಕಾರ ಪ್ರತಿ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೆಣ್ಣು ಮಗು ಲಿಂಗಾನುಪಾತ ಕಡಿಮೆ ಇರುವ ಕನಿಷ್ಠ ಒಂದು ಜಿಲ್ಲೆಯಂತೆ ಆಯ್ದುಕೊಂಡು ಒಟ್ಟು ನೂರು ಜಿಲ್ಲೆಗಳನ್ನು ಗುರುತಿಸಲಾಗಿದೆ.

ಹೆಣ್ಣುಮಕ್ಕಳ ಆತ್ಮಗೌರವ, ಅಭಿವ್ಯಕ್ತಿ ಸ್ವಾತಂತ್ರ್ಯ, ಸನ್ನಡತೆ, ಹಕ್ಕು ಬಾಧ್ಯತೆ, ಸ್ತ್ರೀ ಪುರುಷ ಸಮಾನತೆಯನ್ನು ಹೊಂದಿ ಪುರುಷರೊಂದಿಗೆ ಸಮಾನವಾದ ಸಹಜೀವನದ ನಿರ್ವಹಣೆಗೆ ಶಿಕ್ಷಣ ಅತ್ಯಗತ್ಯ. ಪ್ರತಿಯೊಬ್ಬ ಹೆಣ್ಣುಮಗಳು ಸ್ವಂತಿಕೆ, ಸ್ವಾಭಿಮಾನ ಸ್ವಾವಲಂಬನೆಯೊಂದಿಗೆ ವೈಯಕ್ತಿಕ ಜೀವನದ ಜೊತೆಗೆ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಜೀವನದಲ್ಲಿ ಮುಂದುವರಿಯಲಿ, ಇಂತಹ ವಿಚಾರಗಳು ಕೇವಲ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಮಾತ್ರವಲ್ಲ ಸರ್ವಕಾಲಕ್ಕೂ ಪ್ರಸ್ತುತವಲ್ಲವೆ?.

**ಫಾ. ಸೆಬಾಸ್ಟಿಯನ್ ಫರ್ನಾಂಡಿಸ್**
**ನಿರ್ದೇಶಕರು, ಕ್ರಾಸ್ ಸಂಸ್ಥೆ.**

# ಮಹಿಳಾ ಸಮಾನತೆಯೆಡೆಗೆ ಒಂದು ಹೆಜ್ಜೆ

– ಶ್ರೀ ವರ್ಗೀಸ್ ಜಿ.ಎಂ.

**"ಹೆಣ್ಣು ಮಕ್ಕಳ ಬದುಕಿನ ಸುಧಾರಣೆಗಳ ಆಧಾರದ ಮೇಲೆ ಸಮಾಜದ ಪ್ರಗತಿಯನ್ನು ಅಳೆಯಬೇಕು" – ಡಾ. ಬಿ.ಆರ್.ಅಂಬೇಡ್ಕರ್**

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ/ಪುತ್ರಸ್ತು ಸ್ಥವಿರೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ! ಅಂದರೆ ಹೆಣ್ಣನ್ನು ಬಾಲ್ಯದಲ್ಲಿ ತಂದೆಯು ರಕ್ಷಿಸುತ್ತಾನೆ, ಯೌವನದಲ್ಲಿ ಗಂಡನು ರಕ್ಷಿಸುತ್ತಾನೆ, ವೃದ್ಧಾಪ್ಯದಲ್ಲಿ ಮಗನು ರಕ್ಷಿಸುತ್ತಾನೆ, ಆದುದರಿಂದ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬುದು ಮನುವಿನ ವಿಚಾರ. ಶತಮಾನಗಳಿಂದ ಮಹಿಳೆಯ ಮೇಲೆ ದೈಹಿಕ ಶೋಷಣೆ, ಅನ್ಯಾಯ, ಅತ್ಯಾಚಾರಗಳನ್ನು ನಡೆಸುತ್ತಿದ್ದರೂ ಪ್ರಪಂಚದ ಎಲ್ಲ ಮಹಿಳೆಯರೂ ಮೂಕರಂತೆ ಅಸಹಾಯಕರಾಗಿದ್ದ ಕಾಲವೊಂದಿತ್ತು. ಭಾರತದಲ್ಲಿ ಇಂದೂ ಕೂಡ ಪ್ರತಿಯೊಂದು ಗಂಟೆಯಲ್ಲಿ ಕನಿಷ್ಠ ಎರಡು ಬಲತ್ಕಾರಗಳಾಗುತ್ತವೆ. ಎಷ್ಟೋ ಮಹಿಳೆಯರು ಎಲ್ಲವನ್ನು ಮೌನವಾಗಿ ಸಹಿಸಿಕೊಳ್ಳುತ್ತಾ, ದುಷ್ಟ ಶಕ್ತಿಗಳಿಗೆ ಹೆದರಿ ಅವುಗಳಿಗೆ ಬಲಿಯಾಗುತ್ತಾ ಇಲ್ಲವೇ ತಮ್ಮ ಜೀವನವನ್ನು ಕೊನೆಗಾಣಿಸುತ್ತಾ ಈ ಜ್ವಲಂತ ಸಮಸ್ಯೆಗಳನ್ನು ಸಮಸ್ಯೆಗಳನ್ನಾಗಿಯೇ ಉಳಿಸಿ ಕರಗಿ ಹೋಗುತ್ತಿರುವುದು ಸುಳ್ಳಲ್ಲ. ಮಹಿಳೆ ತನ್ನ ನ್ಯಾಯಸಮ್ಮತ ಹಕ್ಕಿಗಾಗಿ ಹೋರಾಟ ಮಾಡಿದ ದಿನವನ್ನು ಇಂದಿನ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಕರೆಯಲಾಗಿದೆ.

### ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ :

ಮಾರ್ಚ್ 08 ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಈ ದಿನಕ್ಕೆ ಜಾಗತಿಕ ಮಹಿಳಾ ಇತಿಹಾಸದಲ್ಲಿ ತನ್ನದೇ ಆದ ಮಹತ್ವದ ವೈಶಿಷ್ಟ್ಯ ಇದೆ. ಪುರುಷ ಪ್ರಧಾನ ಸಮಾಜದಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಮುಷ್ಠಿಯಲ್ಲಿ ನಲುಗಿಹೋದ ಮಹಿಳೆ ಪ್ರಪ್ರಥಮವಾಗಿ ತನ್ನ ಧ್ವನಿ ಎತ್ತಿ ಸಂಘಟನೆಯನ್ನು ತೋರಿದ ಪ್ರಮುಖ ದಿನ.

- 1889ರಲ್ಲಿ ಪ್ಯಾರಿಸ್ ನಗರದಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ಸಮಾವೇಶವೊಂದು ಜರುಗಿ ಅಲ್ಲಿ ಮಹಿಳಾ ಚಳವಳಿಯ ನಾಯಕಿ ಕ್ಲಾರಾ ಜೆಟ್ ಪುರುಷರಿಗಿರುವಂತೆ ಮಹಿಳೆಯರಿಗೂ ಸಮಾನ ಹಕ್ಕುಗಳನ್ನು ನೀಡಬೇಕೆಂದು ತಮ್ಮ ಬೇಡಿಕೆಯನ್ನು ಮಂಡಿಸಿದರು. ಮೊದಲ ಬಾರಿಗೆ ಮಹಿಳಾ ಹಕ್ಕುಗಳ ಪ್ರಸ್ತಾಪವಾದುದೇ ಅಲ್ಲಿಂದ.
- 1908, ಮಾರ್ಚ್ ತಿಂಗಳ 8ರಂದು ಅಮೆರಿಕಾದ ನ್ಯೂಯಾರ್ಕಿನ ಜವಳಿ ಗಿರಣಿಯಲ್ಲಿ ದುಡಿಯುತ್ತಿದ್ದ ಮಹಿಳೆಯರು ಪುರುಷರಿಗೆ ಕೊಡುವಷ್ಟೇ ವೇತನ, ಗೊತ್ತುಪಡಿಸಿದ ಅವಧಿಯಷ್ಟೇ ಕೆಲಸ, ಮತ ಚಲಾಯಿಸುವ ಹಕ್ಕು ಇವುಗಳಿಗಾಗಿ ಒಂದು ಹೋರಾಟವನ್ನೇ ನಡೆಸಿದರು.
- ಡೆನ್ಮಾರ್ಕಿನ ರಾಜಧಾನಿ ಕೋಪನ್ ಹೇಗನ್ ನಗರದಲ್ಲಿ ಮಾರ್ಚ್ 1910ನೆ ಇಸವಿಯಲ್ಲಿ ನಡೆದ ಎರಡನೆಯ ಅಂತರರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮ್ಮೇಳನದಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ನೀಡಬೇಕೆಂಬ ಒತ್ತಾಯವನ್ನು ಗಮನಿಸಿ ಪ್ರತಿ ವರ್ಷ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸುವ ನಿರ್ಣಯ ಕೈಗೊಳ್ಳಲಾಯಿತು.
- 1917ರ ಮಾಚ್ 8 ರಂದು ರಷ್ಯಾದಲ್ಲಿ ಮಹಿಳೆಯರು ದೊರೆ ಜಾರ್ ವಿರುದ್ಧ ಬಂಡೆದ್ದು ಪ್ರತಿಭಟನಾ ಮೆರವಣಿಗೆ ನಡೆಸಿದ್ದರು.
- ವಿಶ್ವ ಸಂಸ್ಥೆ 1945ರಲ್ಲಿ ಸ್ಥಾಪನೆಗೊಂಡ ಮೇಲೆ ಮಾರ್ಚ್ 8ರಂದು ಮಹಿಳಾ ದಿನ ಆಚರಿಸುವುದನ್ನು ಅಂಗೀಕರಿಸಿತು.
- ವಿಶ್ವ ಸಂಸ್ಥೆ 1975ನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವಾಗಿ ಘೋಷಿಸಿತು.

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (ಡಿಸೆಂಬರ್ 10, 1948)ಜಾರಿಯಾಗಿ 68 ವರ್ಷ ಹಾಗೂ ಸಮಾನತೆ – ಸಾಮಾಜಿಕ ನ್ಯಾಯ ಮತ್ತು ತಾರತಮ್ಯರಹಿತ ಮೌಲ್ಯಗಳನ್ನು ಪ್ರತಿ ಪಾದಿಸುವ ನಮ್ಮ ಭಾರತದ ಸಂವಿಧಾನವು ಜಾರಿಯಾಗಿ 66 ವರ್ಷಗಳು ಕಳೆದಿವೆ. ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತಾರತಮ್ಯವನ್ನು ತೊಡೆದುಹಾಕುವ ಹಲವು ಒಡಂಬಡಿಕೆಗಳಾಗಿವೆ. ಸ್ವಾತಂತ್ರ್ಯಾನಂತರ ನಮ್ಮ ದೇಶದಲ್ಲಿ ಲಿಂಗ ಸಮಾನತೆ ಸಾಧಿಸಲು ಅನೇಕ ಕಾಯಿದೆಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ ಕೆಲವು; ಬಾಲ್ಯ ವಿವಾಹ ನಿಷೇಧ ಕಾಯಿದೆ,ಲಿಂಗ ಆಯ್ಕೆ ನಿಷೇಧ ಕಾನೂನು,ಸಮಾನ ಕೆಲಸಕ್ಕೆ ಸಮಾನ ಕೂಲಿ,ವರದಕ್ಷಿಣೆ ನಿಷೇಧ ಅಧಿನಿಯಮ 1961, ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ರಕ್ಷಿಸುವಲ್ಲಿ ಕಾಯಿದೆ – 2005, ದುಡಿಯುವ ಮಹಿಳೆಯರಿಗಿರುವ ಕಾನೂನು ಸೌಲಭ್ಯಗಳು,ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಪ್ರಕರಣಗಳು ತಡೆಗಟ್ಟುವಲ್ಲಿ ಕಾನೂನು ಸೌಲಭ್ಯಗಳು,ಗರ್ಭಧಾರಣೆ ಪೂರ್ವ ಮತ್ತು ಜನನ ಪೂರ್ವ ರೋಗ ಪರೀಕ್ಷೆ ತಂತ್ರಜ್ಞಾನ (ಲಿಂಗ ಆಯ್ಕೆ ನಿಷೇಧ ಕಾನೂನು 1994), ಮಹಿಳೆ ಹಾಗು ಆಸ್ತಿ ಹಕ್ಕುಗಳು ಕುರಿತ ಕಾನೂನು, ಮತ್ತು ಹೆರಿಗೆ ಸೌಲಭ್ಯ ಅಧಿನಿಯಮ ಇತ್ಯಾದಿ,.

ಭಾರತದ ಸಂವಿಧಾನದ ಈ ಕೆಳಗಿನ ಪರಿಚ್ಛೇದಗಳು ಮಹಿಳಾ ಸಮಾನತೆಯನ್ನು ಖಾತರಿ ಪಡಿಸಿದ್ದರೂ ಭಾರತೀಯ ಮಹಿಳೆಯರು ಇಂದಿಗೂ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಷ್ಟು ಸಮಾನತೆಯನ್ನು ಹೊಂದಲು ಸಾಧ್ಯವಾಗಿಲ್ಲ.

### ಮಹಿಳೆಯರಿಗಾಗಿ ಸಂವಿಧಾನಾತ್ಮಕ ಭರವಸೆಯ ಅಂಶಗಳು:

- ಅನುಚ್ಛೇದ 14: ಕಾನೂನಿನ ಮುಂದೆ ಸಮಾನತೆ
- ಅನುಚ್ಛೇದ 15(1): ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯ ನಿಷೇಧ
- ಅನುಚ್ಛೇದ 15(3): ಹೆಂಗಸರು ಮತ್ತು ಮಕ್ಕಳಿಗೆ ವಿಶೇಷ ಉಪಬಂಧ ಮಾಡುವುದಕ್ಕೆ ರಾಜ್ಯವನ್ನು ಪ್ರತಿಬಂಧಿಸತಕ್ಕುದಲ್ಲ
- ಅನುಚ್ಛೇದ 16: ಸಾರ್ವಜನಿಕ ನಿಯೋಜನೆ ಅಥವಾ ನೇಮಕಾತಿ ವಿಷಯದಲ್ಲಿ ಎಲ್ಲ ನಾಗರೀಕರಿಗೂ ಸಮಾನ ಅವಕಾಶ
- ಅನುಚ್ಛೇದ 39(ಕ): ರಾಜ್ಯವು ಅನುಸರಿಸಬೇಕಾದ ಕೆಲವು ತತ್ವಗಳಲ್ಲಿ, ಪುರುಷರು ಮತ್ತು ಸ್ತ್ರೀಯರು ಸಮಾನವಾಗಿ ಜೀವನ ನಿರ್ವಹಿಸುವುದಕ್ಕೆ ಸಾಕಷ್ಟು ಅವಕಾಶಗಳನ್ನು ಹೊಂದಿರಬೇಕು
- ಅನುಚ್ಛೇದ 39(ಫ): ಪುರುಷರಿಗೆ ಮತ್ತು ಸ್ತ್ರೀಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವುದು
- ಅನುಚ್ಛೇದ 42: ಕೆಲಸ ಮಾಡಲು ನ್ಯಾಯ ಸಮ್ಮತ ಮತ್ತು ದಯಾಪರ ಸ್ಥಿತಿಗಳಿರುವಂತೆ ಮತ್ತು ಪ್ರಸೂತಿ ಪರಿಹಾರ ದೊರೆಯುವಂತೆ ಉಪಬಂಧಿಸುವುದು
- ಅನುಚ್ಛೇದ 51(ಕ) (ಇ): ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

### ರಾಜಕೀಯರಂಗದಲ್ಲಿ ಮಹಿಳೆ:

ಸ್ವತಂತ್ರ ಭಾರದಲ್ಲಿ ಮಹಿಳೆಗೆ ರಾಜಕೀಯವಾಗಿ ಮುಂದುವರಿಯಲು ಭಾರತದ ಸಂವಿಧಾನವು ಖಾತರಿ ಪಡಿಸಿದ್ದರೂ ಭಾರತೀಯ ಮಹಿಳೆಯರು ಇಂದಿಗೂ ಈ ಕ್ಷೇತ್ರದಲ್ಲಿ ಪುರುಷರಷ್ಟು ಸಮಾನತೆಯನ್ನು ಹೊಂದಲು ಸಾಧ್ಯವಾಗಿಲ್ಲ.

ಸಂವಿಧಾನದ 73 ನೇ ತಿದ್ದುಪಡಿಯ ನಂತರ ಕರ್ನಾಟಕ ರಾಜ್ಯವು 2015ರಲ್ಲಿ ವಿಕೇಂದ್ರಿಕರಣ ವ್ಯವಸ್ಥೆಯ ಮೂಲಕ ಮಹಿಳೆಗೆ ಶೇಕಡಾ 50 ಮೀಸಲಾತಿ ಒದಗಿಸಿದ್ದು ಈ ಸ್ಥಾನಗಳು ಭರ್ತಿಯಾದುದನ್ನು ಬಿಟ್ಟು ಹೆಚ್ಚಿನದೇನನ್ನು ಸಾಧಿಸಲಾಗಿಲ್ಲ. ನಮ್ಮ ಸಂಸತ್ತಿನಲ್ಲಿ ಮಹಿಳೆಗೆ 33% ಮೀಸಲಾತಿಯ ಬಗ್ಗೆ ಪ್ರಸ್ತಾಪನೆ ದಶಕಗಳ ಹಿಂದೆ ನಡೆದಿದ್ದರೂ ಸ್ಥಾಪಿತ ಹಿತಾಸಕ್ತಿಗಳ ಕೈವಾಡಗಳಿಂದ ಇದು ನನಸಾಗದೇ ಬಿದ್ದಿದೆ. ಒಬ್ಬ ಮಹಿಳೆ ಭಾರತದ ಪ್ರಧಾನ ಮಂತ್ರಿಗಳಾಗಿ ಶೋಭಿಸಿದರೆ ಮತ್ತೊಬ್ಬ ಮಹಿಳೆ ರಾಷ್ಟ್ರಪತಿಯಾಗಿ ಭಾರತದ ಇತಿಹಾಸದಲ್ಲಿ ದಾಖಲಾಗಿದ್ದಾರೆ. ಆದರೂ ಸಾಮಾನ್ಯ ಮಹಿಳೆಯ ಸ್ಥಿತಿಗತಿಗಳಲ್ಲಿ ಹೇಳಿಕೊಳ್ಳುವ ಬದಲಾವಣೆ ಏನೂ ಆಗಿಲ್ಲ.

**ಮಹಿಳೆ ಧಾರ್ಮಿಕ ರಂಗದಲ್ಲಿ :**

ನಿಯಂತ್ರಣ ಪ್ರಕ್ರಿಯೆಯಲ್ಲಿ ಸಾಮಾಜಿಕವಾಗಿ ಮಹಿಳೆಗೆ ಒಂದಷ್ಟು ನಿಯಮಗಳಿದ್ದರೆ, ಧಾರ್ಮಿಕವಾಗಿ ಮತ್ತಷ್ಟು ಕಟುವಾದ ನಿಯಮಗಳಿವೆ. ಜಾತಿ ವ್ಯವಸ್ಥೆ ಅಳಿಯಬೇಕು ಎಂದು ಬಯಸುವ ಎಲ್ಲರಲ್ಲಿಯೂ ಮಾನವ ಸಮಾನತೆಯ ಮೂಲ ಆಶಯ ಇದ್ದೇ ಇರುತ್ತದೆ. ಅಂದ ಮೇಲೆ ಮಹಿಳೆ ಮತ್ತು ಪುರುಷರ ನಡುವಿನ ಅಸಮಾನ ವ್ಯವಸ್ಥೆಯೂ ಒಪ್ಪತಕ್ಕ ವಿಚಾರವಲ್ಲ. ಮಾತುಗಳಲ್ಲಿ, ಸಿದ್ಧಾಂತ ರೂಪದಲ್ಲಿ ಈ ಬಗ್ಗೆ ಎಷ್ಟೇ ಹೇಳಿದರೂ ಅದು ಪ್ರಾಯೋಗಿಕವಾಗಿ ಅತೀ ಅಪರೂಪ. ದೇವಾಲಯಗಳಲ್ಲಿ ಮಹಿಳೆಗೆ ವಿಧಿಸಲಾದ ಧಾರ್ಮಿಕ ನಿಷೇಧವನ್ನು ಇನ್ನೂ ಏಕೆ ತೆಗೆದು ಹಾಕಬಾರದು ಎಂಬ ಚರ್ಚೆಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕಾಗಿದೆ.

**ಶಿಕ್ಷಣ ವಲಯದಲ್ಲಿ ಮಹಿಳೆ :**

ಮಕ್ಕಳ ಉಚಿತ ಮತ್ತು ಖಡ್ಡಾಯ ಶಿಕ್ಷಣ ಕಾಯಿದೆ –2009, ಜಾರಿಗೆ ಬಂದರೂ ಶಿಕ್ಷಣದ ಪ್ರತಿ ಹಂತದಲ್ಲಿಯೂ ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ಕಡಿಮೆ ಶೈಕ್ಷಣಿಕ ಮಟ್ಟವನ್ನು ಹೊಂದಿದ್ದು, ಲಿಂಗ ಅಸಮಾನತೆಯಿರುವುದನ್ನು ತೋರಿಸುತ್ತದೆ. ಹೆಣ್ಣು ಶಿಕ್ಷಣ ಪಡೆಯುವುದು ಇಂದು ಅವಳ ಆಜನ್ಮಸಿದ್ಧ ಹಕ್ಕಾಗಿದೆ. 'ಶಿಕ್ಷಣ'ವು ಅವಳನ್ನು ಒಬ್ಬ ಪರಿಪೂರ್ಣ ಮಹಿಳೆಯನ್ನಾಗಿ ರೂಪಿಸುತ್ತದೆ. ಜವಾಬ್ದಾರಿ ಬೆಳೆಸುತ್ತದೆ. ಕೀಳರಿಮೆ ತೋರಗೊಡುವುದಿಲ್ಲ. ಆಕೆಗೆ ತನ್ನ ಜೀವನದಲ್ಲಿ ದಿಟ್ಟ ಹೆಜ್ಜೆಗಳನ್ನಿಟ್ಟು, ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಲು ಬೇಕಾದ ಎಲ್ಲಾ ಆಯಾಮಗಳನ್ನು ಒದಗಿಸುತ್ತದೆ ಶಿಕ್ಷಣ. ತಾನು ತನ್ನೊಂದಿಗಿನ ಕುಟುಂಬ ಹಾಗೂ ಸಮಾಜವನ್ನು ಸ್ವಾಸ್ಥ್ಯಗೊಳಿಸುವ ಪ್ರಕ್ರಿಯೆಯ ಜೊತೆಗೆ ಸುಸಂಸ್ಕೃತ ಮಹಿಳೆಯನ್ನಾಗಿ ರೂಪಿಸುತ್ತದೆ. ಈ ನಿಟ್ಟಿನಲ್ಲಿ ಪೂರ್ವ ಮತ್ತು ಪಾಶ್ಚಿಮಾತ್ಯ ದಾರ್ಶನಿಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಮಹಾತ್ಮ ಗಾಂಧೀಜಿ **'ಹೆಣ್ಣು ಮಗಳೊಬ್ಬಳು ಮಧ್ಯರಾತ್ರಿಯಲ್ಲಿ ಸ್ವತಂತ್ರ್ಯವಾಗಿ ನಡೆದು ಬರುವುದೇ ಸ್ವಾತಂತ್ರ್ಯ'** ಎಂದಿದ್ದಾರೆ.

ಕನ್ನಡ ಸಾರಸ್ವತ ಲೋಕದ ಧೀಮಂತ ಮಹಿಳೆ, ಹದಿಬದೆಯ ಧರ್ಮದ ರೂವಾರಿ ಸಂಚಿ ಹೊನ್ನಮ್ಮ ಕಾವ್ಯ ರಚನೆ ಮಾಡಿ, ಹೆಣ್ಣುಮಕ್ಕಳ ಸಮಗ್ರ ಅಭಿವೃದ್ಧಿಗೆ ದಾರಿ ತೋರಿದಳು. ಹೆಣ್ಣೆಂದು ಹೀಗಳೆದು ಶಿಕ್ಷಣದಿಂದ ವಂಚಿತರನ್ನಾಗಿಸುವ, ಬೀದಿಯಲ್ಲಿ ಭಿಕ್ಷೆಗೆ ಕಳಿಸುವ, ಕಸ ಮುಸುರೆ ಮನೆಗೆಲಸಕ್ಕೆ ಕಳಿಸುವ, ಚಿಂದಿ ಆಯಲು ಕಳಿಸುವ, ನೆರೆದಳೆಂದು ಮೂಲೆಗೆ ಕೂಡಿಸುವ, ಬೇಜಾಬ್ದಾರಿಯಿಂದ ಬಾಲ್ಯವಿವಾಹ ಮಾಡುವ ಪಾಲಕರು ಇಂದಿಗೂ ದಿನನಿತ್ಯ ನಮಗೆದುರಾಗುತ್ತಾರೆ. ಪುಟ್ಟ ಬಾಲಕಿಯರ ಮೇಲೆ ದೌರ್ಜನ್ಯ ಬಲತ್ಕಾರ ನಿರಂತರವಾಗಿದೆ. ಹದಿಬದೆಯಲ್ಲಿ ಸ್ತ್ರೀಯರ ಸ್ಥಾನ ಮಾನದ ಬಗ್ಗೆ 16ನೇ ಶತಮಾನದಲ್ಲೇ ಹೊನ್ನಮ್ಮ ತನ್ನ ಕವನಗಳ ಮೂಲಕ ಜನಸಮುದಾಯದ ಕಣ್ಣುತೆರೆಸುವಂತೆ ಮಾಡಿದರು.

**ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದ ತಾಯಿ**
**ಪೆಣ್ಣಲ್ಲವೆ ಪೊರೆದವಳು**
**ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು**
**ಕಣ್ಣು ಕಾಣದ ಗಾವಿಲರು**

ಇಂದಿಗೂ ನಮ್ಮ ನಾಲಗೆಯ ಮೇಲೆ ಈ ಪ್ರಸಿದ್ಧ ಸಾಲುಗಳು ಸ್ಮರಣೆಯಲ್ಲಿದೆ. ಗಂಡು ಹೆಣ್ಣೆಂಬ ತಾರತಮ್ಯವೇಕೆ ಇಬ್ಬರೂ ಸಮಾನ ಹಕ್ಕುಳ್ಳುವರೆಂಬ ದಿಟ್ಟ ನಿಲುವನ್ನು ಪ್ರತಿಪಾದಿಸಿದರು. ಸ್ತ್ರೀ ಸಮಾನತೆಯ ವಿಚಾರಗಳನ್ನು ಧೈರ್ಯವಾಗಿ ಹೇಳಿದ್ದಾಳೆ.

ಹಿಂದೆ 'ಕೀರ್ತಿಗೊಬ್ಬ ಮಗ ಆರತಿಗೊಬ್ಬಳು ಮಗಳು' ಎಂದಿತ್ತು. ಈಗ ಬದಲಾಗಿ ಆಸ್ತಿಗೊಬ್ಬ ಮಗ ಆಸರೆಗೊಬ್ಬಳು ಮಗಳು ಎಂದಾಗಿದೆ. ಗಂಡುಮಕ್ಕಳು ಓದಿ ಕುಲವನ್ನುದ್ಧರಿಸುತ್ತಾರೆ ಎಂಬ ನಂಬಿಕೆ ಅನಾದಿ ಕಾಲದಿಂದಲೂ ಇದೆ. 'ನಪುತ್ರಂ ಗತಿರ್ನಾಸ್ತಿ' ಮುಂತಾದ ನುಡಿಗಟ್ಟುಗಳು ಹುಟ್ಟಿಕೊಂಡದ್ದೂ ಈ ಹಿನ್ನೆಲೆಯಲ್ಲಿಯೇ. ಆದರೆ ಇದನ್ನು ಹೊನ್ನಮ್ಮ ಒಪ್ಪುವುದಿಲ್ಲ. ಕುಲಪುತ್ರನು ಓದಿದರೆ ಸಾಲದು, ತಿಳಿದು ನಡೆದುಕೊಳ್ಳಬೇಕು. ಘನತರದ ನಡತೆ ಮಾತ್ರ ಮನುಷ್ಯನನ್ನು ಉದ್ಧರಿಸಬಲ್ಲದು ಎಂದು ಹೇಳುತ್ತಾ ಹೆಣ್ಣುಮಗಳನ್ನು ಓದಿಸಿದರೆ ಸಾಕು, ಅದರಿಂದ ಆಕೆ ಹುಟ್ಟಿದ ಮತ್ತು ಕೊಟ್ಟ ಮನೆಯೆರಡನ್ನೂ ಉದ್ಧರಿಸುತ್ತಾಳೆ ಎಂದಿದ್ದಾಳೆ.

ಹೆಣ್ಣುಮಕ್ಕಳ ಆತ್ಮಗೌರವ, ಅಭಿವ್ಯಕ್ತಿ ಸ್ವಾತಂತ್ರ್ಯ, ಹಕ್ಕು ಸ್ತ್ರೀ ಪುರುಷ ಸಮಾನತೆಯನ್ನು ತಿಳಿಸಿ ಬಿಂಬಿಸುವ ಸಹಜೀವನದ ನಿರ್ವಹಣೆಗೆ ಶಿಕ್ಷಣ ಅತ್ಯಗತ್ಯ. (ಕೃಪೆ: ಸಂಚಿ ಹೊನ್ನಮ್ಮ ಮತ್ತು ಹೆಣ್ಣುಮಕ್ಕಳ ಶೈಕ್ಷಣಿಕ ವಿಚಾರಗಳು ಮಾರ್ಚ್–2015.)

ಕಳೆದ ತಿಂಗಳಷ್ಟೇ ಮತ್ತೊಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿದ್ದೇವೆ. ಈ ಸಭೆ ಸಮಾರಂಭ ಆಚರಣೆಗಳು ಮನಸ್ಸಿಗೆ ಸಂತೋಷ ನೀಡಿ ಮರೆತುಹೋಗುವ ಕಾರ್ಯಕ್ರಮಗಳು. ಈ ಬಾರಿಯ ಆಚರಣೆಯಲ್ಲಿ ನಾವು ಸ್ಮರಿಸಿಕೊಳ್ಳುವ ಅಂಶವೊಂದಿದೆ. ಈ ವರ್ಷದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಘೋಷವಾಕ್ಯ **"ಸಮಾನತೆಗಾಗಿ ಪ್ರತಿಜ್ಞೆ"**. ದೈನಂದಿನ ಮನೆಗೆಲಸಗಳಲ್ಲಿ ಪುರುಷರು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಸಮಾನತೆಯ ಭಾಗವಲ್ಲವೇ? ಸಮಾನತೆಗಾಗಿ ಪ್ರತಿಜ್ಞೆ ಕೈಗೊಳ್ಳುವುದೆಂದರೆ ನಾವು ಪ್ರಜ್ಞಾಪೂರ್ವಕವಾಗಿ ಮತ್ತು ಜೀವನದ ಉಳಿದ ಭಾಗದಲ್ಲಿ ಸಮಾನತೆಯನ್ನು ಕನಿಷ್ಠ ನಮ್ಮ ಕುಟುಂಬದಲ್ಲಾದರೂ ಒಪ್ಪಿ ಗೌರವಿಸಿ, ಜಾರಿಗೊಳಿಸುವ ಬದ್ಧತೆಯಿಂದ ತೆಗೆದುಕೊಳ್ಳುವ ನಿರ್ಧಾರ. ಇದು ಭಾಷಣ ಅಥವಾ ಅನುಕಂಪದಿಂದ ಆಗುವ ಕೆಲಸವಲ್ಲ, ಬದಲಿಗೆ, ನಮ್ಮ ಮನೋಧೋರಣೆಯನ್ನು ಬದಲಿಸಿಕೊಳ್ಳುವ ಮತ್ತು ಶತಮಾನಗಳಿಂದ ನಾವು ಕಲಿತು ರೂಢಿಸಿಕೊಂಡಿರುವ ಕೆಲವು ಧೋರಣೆಯನ್ನು ತೊರೆಯುವ ಪ್ರಕ್ರಿಯೆಯಿಂದ ಸಾಧ್ಯವಾಗಬಹುದಾದ ಕೆಲಸ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸಂಧರ್ಭದಲ್ಲಿ ನಾವು ಘೋಷಿಸಿರುವ ಸಮಾನತೆಯ ಈ ಪ್ರತಿಜ್ಞೆ ಕುಟುಂಬದ ಹಂತದಿಂದಲೇ ಸಾಕಾರಗೊಳಿಸುವುದು ಅತ್ಯಂತ ಪ್ರಾಯೋಗಿಕ ವಿಧಾನ. ಸಮಾನತೆ ಸಾಧನೆಯ ಮೊದಲ ಹೆಜ್ಜೆಯಾಗಿ ಕುಟುಂಬದಲ್ಲಿನ ಪ್ರತಿಯೊಂದು ಹೆಣ್ಣು ಹಾಗೂ ಗಂಡು ಪರಸ್ಪರ ಗೌರವಿಸುವ, ಪ್ರೀತಿಸುವ, ಸಹಕರಿಸುವ ಮತ್ತು

ಪರಸ್ಪರ ಚರ್ಚೆಯ ಮೂಲಕ ತೀರ್ಮಾನಿಸುವ ಹೊಸ ಸಂಸ್ಕೃತಿಯನ್ನು ರೂಢಿಸಿಕೊಳ್ಳಬೇಕು. ಕೌಟುಂಬಿಕ ಹಂತದಲ್ಲಿ ಸಮಾನತೆಯನ್ನು ಸಾಧಿಸಲು ದಿನ ನಿತ್ಯದ ಕೆಲಸಗಳಲ್ಲಿ ಹೆಣ್ಣು ಹಾಗೂ ಗಂಡು ಜೊತೆ ಜೊತೆಯಾಗಿ ಕೈಜೋಡಿಸುವ ಮತ್ತು ಸಹಕರಿಸುವ ಸಣ್ಣ ಸಣ್ಣ ಕೆಲಸಗಳನ್ನು ಪ್ರಾರಂಭಿಸಬೇಕು. ಬೆಳಗಿನಿಂದ ಸಂಜೆಯವರೆಗೆ ದಿನವೊಂದರಲ್ಲಿ ನಾವು ಮಾಡಬಹುದಾದ ಕೆಲಸಗಳಲ್ಲಿ ಸಮಾನತೆಯನ್ನು ಸಾಧಿಸಲು ನಮಗೆ ಅನೇಕ ಅವಕಾಶಗಳಿವೆ.

**ಭಾರತ ಸರ್ಕಾರ ಬೇಟಿ ಬಚಾವೊ ಬೇಟಿ ಪಢಾವೊ ಮಗಳನ್ನು ರಕ್ಷಿಸಿ ಮಗಳನ್ನು ಓದಿಸಿ ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ.**

ಈ ಯೋಜನೆಯ ಒಟ್ಟಾರೆ ಉದ್ದೇಶ ಹೆಣ್ಣು ಮಗುವಿನ ಹುಟ್ಟನ್ನು ಸಂಭ್ರಮಿಸಿ ಆಕೆಗೆ ಶಿಕ್ಷಣ ದೊರಕುವಂತೆ ಮಾಡುವುದು. ಲಿಂಗ ಆಯ್ಕೆ ತಡೆಗಟ್ಟುವ ಮೂಲಕ ಲಿಂಗತಾರತಮ್ಯ ತೊಲಗಿಸುವುದು, ಹೆಣ್ಣು ಮಗುವನ್ನು ಉಳಿಸಿ, ರಕ್ಷಿಸಿ, ಶಿಕ್ಷಣ ಕೊಡಿಸುವುದು.

ನಾವು ನಮ್ಮ ಪುರುಷ ಪ್ರಧಾನ ಮನಸ್ಥಿತಿಯಿಂದ ಹೊರಬಂದು ಮಹಿಳೆಯನ್ನು ಅರ್ಥಮಾಡಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡದದಿದ್ದರೆ ಸಮಾನತೆ ಮರೀಚಿಕೆಯಾಗಿ ಉಳಿಯುವ ಸಾಧ್ಯತೆಯೇ ಹೆಚ್ಚು. ಈ ವಿಷಯದಲ್ಲಿ ಪ್ರತಿಯೊಬ್ಬ ಪುರುಷ ಮತ್ತು ಮಹಿಳೆ ಗಂಭೀರವಾಗಿ ಆಲೋಚಿಸಬೇಕಿದೆ. ಒಟ್ಟಾರೆ ದಿನ ನಿತ್ಯದ ನಮ್ಮ ಕೌಟುಂಬಿಕ ಜೀವನದಲ್ಲಿ ಕೊಡುಕೊಳ್ಳುವಿಕೆಯ ಮೂಲಕ ಈಗಿರುವ ಹಲವು ಬಗೆಯ ಅಸಮಾನತೆ ಮತ್ತು ತಾರತಮ್ಯಗಳನ್ನು ತೊಡೆದು ಹಾಕಿ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಗಂಡು ಹೆಣ್ಣು ತೊಡಗಿಸಿಕೊಳ್ಳಬೇಕು. ಇದು ನಮ್ಮ ಜೀವನ ಕ್ರಮವಾಗಬೇಕು. ಆಗ ಮಾತ್ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ **ಸಮಾನತೆ ಪ್ರತಿಜ್ಞೆ ಅರ್ಥಪೂರ್ಣವಾಗುತ್ತದೆ.** ನಮ್ಮ ಭಾರತ ದೇಶ ಸರ್ವ ಜನಾಂಗದ ನಾಡು ಹೆಂಗಳೆಯರ ಸಂತಸದ ಬೀಡಾಗ ಎಂಬುದೇ ನಮ್ಮೆಲ್ಲರ ಬಯಕೆ.

---

# ಅಲೊೋವೆರ

**ಡಾ.ರಾಜಶೇಖರ್, ಕ್ರಾಸ್ ಸಂಸ್ಥೆ, ಬೆಂಗಳೂರು**



**ಹಿಂದಿನ ಸಂಚಿಕೆಯಿಂದ . . . .**

ಅಲೊವೆರವನ್ನು ಬೀಜಗಳಿಂದಲೂ ಬೆಳೆಸಬಹುದು. ಇದಕ್ಕಾಗಿ ಕೊಟ್ಟಿಗೆ ಗೊಬ್ಬರ ಮತ್ತು ಕೆಂಪು ಮಣ್ಣು 50:50: ರ ಅನುಪಾತದಲ್ಲಿ ಬೆರೆಸಿ ಪ್ಲಾಸ್ಟಿಕ್ ತಟ್ಟೆಗಳಲ್ಲಿ ಹರಡಿ ಅಲೊವೆರ ಹೂಗಳ ಸಮೇತ ಬೀಜಗಳನ್ನು ಹರಡಿ ಲಘುವಾಗಿ ಮಿಶ್ರಣ ಮಾಡಿ ನೀರನ್ನು ಸಿಂಪಡಿಸಬೇಕು ಮತ್ತು ನ್ಯೂಸ್‌ಪೇಪರ್ ನಿಂದ ಮುಚ್ಚಬೇಕು. ಇದರಿಂದ ತೇವಾಂಶ ಹೊದಿಕೆಯು ಎಲ್ಲೆಡೆ ಉಳಿದು ಬೀಜ ಮೊಳಕೆಯೊಡೆಯಲು ಅನುಕೂಲವಾಗುತ್ತದೆ. ಮೊಳಕೆಯೊಡೆದ ಒಂದು ತಿಂಗಳ ನಂತರ ಮೊಳಕೆಗಳನ್ನು ಪ್ರತ್ಯೇಕ ಏರು ಮಡಿಗಳಲ್ಲಿ ನಾಟಿ ಮಾಡಿ ಪೋಷಿಸಬೇಕು. ಅಗತ್ಯ ಬಿದ್ದರೆ ಯಾವುದಾದರೂ ಒಂದು ಶಿಲೀಂದ್ರ ನಾಶಕವನ್ನು ಸಿಂಪಡಿಸಬಹುದು.

## ಅಲೋವೇರದ ಬಹು ಉಪಯೋಗಗಳು:

❖ **ಚರ್ಮ ಮತ್ತು ಕೂದಲಿನ ಆರೋಗ್ಯ ಸಂರಕ್ಷಣೆಗಾಗಿ :** ಚರ್ಮದ ವಾರ್ಧಕ್ಯದ ಚಿಹ್ನೆಗಳನ್ನು ಮರೆಸುತ್ತದೆ. ತ್ವಚೆಯ ತೇವಾಂಶವನ್ನು ಸಂರಕ್ಷಿಸುತ್ತದೆ. ತ್ವಚೆಯನ್ನು ಲಘುವಾಗಿಸಿ ಕಾಂತಿಯುತವಾಗಿಸುತ್ತದೆ. ಕಲೆಗಳನ್ನು ಹೋಗಲಾಡಿಸುತ್ತದೆ ಕೂದಲು ಉದುರುವುದನ್ನು ತಡೆಗಟ್ಟುತ್ತದೆ, ತಲೆ ಹೊಟ್ಟನ್ನು ನಿವಾರಿಸುತ್ತದೆ, ನೆತ್ತಿಯ ಚರ್ಮಮದ ರಸಸಾರವನ್ನು ಸಮತೋಲನದಲ್ಲಿಡುತದೆ. ಕೂದಲನ್ನು ಶುಷ್ಕವಾಗಲು ಬಿಡುವುದಿಲ್ಲ.

❖ **ದೇಹಾರೋಗ್ಯಕ್ಕಾಗಿ :** ಉರಿಬಾವು ಶಮನ ಮಾಡುತ್ತದೆ. ಅತಿಸಾರವನ್ನು ನಿಭಾಯಿಸುತ್ತದೆ. ಮಧು ಮೇಹವನ್ನು ನಿಯಂತ್ರಣದಲ್ಲಿಡುತ್ತದೆ. ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುತ್ತದೆ. ಬಾಯಿಯ ಹುಣ್ಣನ್ನು ನಿವಾರಿಸುತ್ತದೆ. ದೇಹದ ತೂಕವನ್ನು ಕಡಿಮೆ ಮಾಡುವಲ್ಲಿ ಸಹಕರಿಸುತ್ತದೆ. ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಕ್ಯಾನ್ಸರಿನ ಅಪಾಯವನ್ನು ತಡೆಗಟ್ಟುವಲ್ಲಿ ಸಹಕರಿಸುತ್ತದೆ. ಹಲ್ಲನ್ನು ಬಿಳುಪಾಗಿಸುತ್ತದೆ.

ಈ ಎಲ್ಲ ವಿಶೇಷ ಗುಣಗಳು ಅಲೊವೇರಾದಲ್ಲಿ ಅಡಗಿರಲು ಕಾರಣ ಇದರಲ್ಲಿರುವ 75 ಪೋಷಕಾಂಶಗಳು, 200 ಕ್ರಿಯಾತ್ಮಕ ಕಾಂಪೌಂಡ್‌ಗಳು, 20 ಖನಿಜಾಂಶಗಳು,18 ಅಮಿನೋ ಆಸಿಡ್ ಗಳು ಮತ್ತು 12 ಜೀವಸತ್ವಗಳು. ಇದರಿಂದಾಗಿ ಈಜಿಪ್ಷನ್ನರು ಅಲೊವೇರಾವನ್ನು ಬಹು ಉಪಯೋಗಿ – ಚಿರಂಜೀವಿ ಸಸ್ಯ ಎಂದು ಕರೆದಿದ್ದಾರೆ. ಅಲೊವೇರಾ ಎಂದೇ ಚಿರಪರಿಚಿತವಾಗಿರುವ ಈ ಸಸ್ಯವನ್ನು ಕನ್ನಡದಲ್ಲಿ ಲೋಳೆಸರ, ಹಿಂದಿಯಲ್ಲಿ ಘೃತ್ ಕುಮರಿ, ತೆಲುಗಿನಲ್ಲಿ ಕಾಲಬಂಡ, ತಮಿಳಿನಲ್ಲಿ ಕತ್ತಲೈ, ಮಲಯಾಳಂನಲ್ಲಿ ಕಟ್ವಾರ್‌ವಾಜ, ಮರಾಠಿಯಲ್ಲಿ ಕೋರ್ ಘಡ, ಬಂಗಾಳಿಯಲ್ಲಿ ಘೃತ್ ಕುಮರಿ ಎಂದು ಕರೆಯುತ್ತಾರೆ.

## ಅಲೋವೇರದ ಸಂಸ್ಕರಣೆ ಮತ್ತು ಬಳಕೆ:

ಅಲೋವೇರ ಗಿಡದ ಬಲಿತ ದಳಗಳನ್ನು ಕೊಯ್ಲು ಮಾಡಿ ಚೆನ್ನಾಗಿ ಶುದ್ಧ ನೀರಿನಲ್ಲಿ ತೊಳೆದು ಹರಿತವಾದ ಚಾಕುವಿನಿಂದ ಪ್ರತಿ ದಳವನ್ನು ಇಬ್ಬಾಗವಾಗಿ ಸೀಳಬೇಕು. ಒಂದೊಂದು ಅರ್ಧಭಾಗದಲ್ಲಿನ ಲೋಳೆ ಭಾಗವನ್ನು ಸಿಪ್ಪೆಯಿಂದ ಬೇರ್ಪಡಿಸಬೇಕು. ಹೀಗೆ ಬೇರ್ಪಡಿಸುವಾಗ ಸಿಪ್ಪೆ ಮತ್ತು ಲೋಳೆಯ ಮಧ್ಯ ಭಾಗದಲ್ಲಿರುವ ಹಳದಿ ಬಣ್ಣದ ಭಾಗವನ್ನು ಬಿಟ್ಟು ಬಿಡಬೇಕು. ಹೀಗೆ ಬೇರ್ಪಡಿಸಿದ ಲೋಳೆಯ ತುಂಡುಗಳನ್ನು ಅಗತ್ಯಕ್ಕೆ ತಕ್ಕಂತೆ ಸಣ್ಣ ತುಂಡುಗಳು ಅಥವಾ ಜೆಲ್ ನ ರೂಪದಲ್ಲಿ ಬಾಟಲಿಗಳಲ್ಲಿ ಅಥವಾ ಸಣ್ಣ ಡಬ್ಬಿಗಳಲ್ಲಿ ಶೇಖರಿಸಿಟ್ಟು ಉಪಯೋಗಿಸಬಹುದು.
ಇದನ್ನು ಸಾಮಾನ್ಯ ಚರ್ಮ ಸಂಬಂಧೀ ತೊಂದರೆಗಳಾದ ಸನ್ ಬರ್ನ್, ಸುಟ್ಟಗಾಯಗಳು ಇತ್ಯಾದಿಗಳಿಗೆ ಬಳಕೆ ಮಾಡಬಹುದು.

**ಮುಂದುವರೆಯುವುದು**

# ಹೈದ್ರಾಬಾದ್ ಕರ್ನಾಟಕಕ್ಕೆ ವರದಾನವಾಗಲಿರುವ ಪರಿಚ್ಛೇದ 371 (ಜೆ)

'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬುದು ಪ್ರಜಾಪ್ರಭುತ್ವದ ಪ್ರಮುಖ ತತ್ವ. ಈ ಸರಳ ತತ್ವವನ್ನು ಅನುಷ್ಠಾನಕ್ಕೆ ತರುವುದು ಹೇಳುವಷ್ಟು ಸುಲಭವಲ್ಲ. ಸರ್ವರನ್ನು ಒಳಗೊಂಡ ಸಮಗ್ರ ಅಭಿವೃದ್ಧಿಗೆ ಪೂರಕ ದೃಷ್ಟಿಕೋನ ಮತ್ತು ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ರಾಜಕೀಯ ಇಚ್ಛಾ ಶಕ್ತಿ ಆಳುವ ಸರಕಾರಕ್ಕೆ ಇರಬೇಕು. ಇದನ್ನು ಪ್ರಾಯೋಗಿಕವಾಗಿ ಅಳವಡಿಸಿದ ಗರಿಮೆ ಪ್ರಸಕ್ತ ಆಡಳಿತದಲ್ಲಿರುವ ಸರಕಾರಕ್ಕೆ ಸಲ್ಲಬೇಕು. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 371 (ಜೆ) ಕಲಂನ ತಿದ್ದುಪಡಿಗೆ ರಾಷ್ಟ್ರಪತಿಗಳು ಸೆಪ್ಟೆಂಬರ್ 16, 2013ರಂದು ಅಂಗೀಕಾರ ನೀಡುವ ಮೂಲಕ ಈ ಭಾಗದ ಅಭಿವೃದ್ಧಿಗೆ ಮುನ್ನುಡಿ ಬರೆಯಲಾಗಿದೆ. ಈ ಸಂಬಂಧದ ಗೆಜೆಟ್ ಅಧಿಸೂಚನೆಗೆ ರಾಜ್ಯಪಾಲರ ಅಂಕಿತವೂ ಬಿದ್ದಿದ್ದು ಸಂವಿಧಾನದ 371 (ಜೆ) ಕಲಂ ತಿದ್ದುಪಡಿಯ ಅನುಷ್ಠಾನದ ಸಂಬಂಧ ರಾಜ್ಯಸರ್ಕಾರ ಗೆಜೆಟ್ ಅಧಿಸೂಚನೆಯನ್ನೂ ಹೊರಡಿಸಲಾಗಿದೆ.

**ಹೈದ್ರಾಬಾದ್– ಕರ್ನಾಟಕ ಪ್ರದೇಶದ ಕುರಿತು ಒಂದಷ್ಟು ಇತಿಹಾಸ :** ಹಲವಾರು ಕಾರಣಗಳಿಂದಾಗಿ ಕರ್ನಾಟಕದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹೈದ್ರಾಬಾದ್ ಕರ್ನಾಟಕವು ಹಿಂದುಳಿದ ಪ್ರದೇಶವಾಗಿದೆ. ಭಾರತಕ್ಕೆ ಆಗಸ್ಟ್ 15, 1947ರಂದು ಸ್ವಾತಂತ್ರ್ಯ ದೊರೆತರೂ ನಿಜಾಮರ ಆಡಳಿತದಲ್ಲಿದ್ದ ಹೈದ್ರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನವಾಗಿರಲಿಲ್ಲ. ನಂತರ ಒಂದು ವರ್ಷದ ತರುವಾಯ ಸೆಪ್ಟೆಂಬರ್ 17, 1948ರಲ್ಲಿ ಹೈದ್ರಾಬಾದ್ ಕರ್ನಾಟಕ ಭಾಗಕ್ಕೆ ವಿಮೋಚನೆ ಸಿಕ್ಕಿತು. ಅಂದು ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಹೈದ್ರಾಬಾದ್ ಸಂಸ್ಥಾನ ಭಾರತ ದೇಶದಲ್ಲಿ ವಿಲೀನಗೊಂಡಿತು. ನಂತರ 1956 ರಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆದ ಮೇಲೆ, ಹೈದ್ರಾಬಾದ್– ಕರ್ನಾಟಕ ಭಾಗದ ಜನರ ಆಶಯದಂತೆ, ಕನ್ನಡ ಭಾಷಿಕರನ್ನೊಳಗೊಂಡ ಈ ಭಾಗದ ಜಿಲ್ಲೆಗಳಾದ ಬೀದರ, ಅವಿಭಜಿತ ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳನ್ನು ಅಂದಿನ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು.

**ಹೈದ್ರಾಬಾದ್– ಕರ್ನಾಟಕ ಪ್ರದೇಶದ ಇಂದಿನ ಸ್ಥಿತಿಗತಿ :** ರಾಜ್ಯದ ಇತಿಹಾಸದಲ್ಲಿ ಹೈದ್ರಾಬಾದ್– ಕರ್ನಾಟಕ ಪ್ರದೇಶದ (ಬೀದರ್, ಗುಲ್ಬರ್ಗಾ ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ) 6 ಜಿಲ್ಲೆಗಳು ತನ್ನದೇ ಆದ ವೈಶಿಷ್ಟ್ಯ ಹೊಂದಿದ್ದು ರಾಜ್ಯದ ಇತರೆ ಪ್ರದೇಶಗಳಿಗೆ ಹೋಲಿಸಿದರೆ ಈ ಪ್ರದೇಶ ಅತ್ಯಂತ ಹಿಂದುಳಿದಿದ್ದು ಇಲ್ಲಿನ ಜನರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಹೈದ್ರಾಬಾದ್–ಕರ್ನಾಟಕ ಪ್ರದೇಶ ಪದೇ ಪದೇ ಪ್ರಕೃತಿ ವಿಕೋಪಕ್ಕೆ ತುತ್ತಾಗುತ್ತಲೇ ಬಂದಿದೆ. ಪ್ರತಿ ವರ್ಷ ಈ ಜಿಲ್ಲೆಗಳು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಬರಪೀಡಿತ ಜಿಲ್ಲೆಗಳಾಗಿ ಕುಡಿಯುವ ನೀರಿನ ಅಭಾವ, ಕೃಷಿ ಚಟುವಟಿಕೆಗಳಿಗೆ ಧಕ್ಕೆ ಹಾಗೂ ಜನರು ಅನೇಕ ಸಮಸ್ಯೆಗಳಿಂದ ಸಂಕಷ್ಟಕ್ಕೆ ಒಳಗಾಗಿದ್ದಾರೆ, ಈ ಜಾಗದ ಜನರಿಗೆ ಬದುಕು ಬಹುದೊಡ್ಡ ಸವಾಲಾಗಿದೆ.

ರಾಜಕೀಯ, ಭೌಗೋಳಿಕ ಕಾರಣಗಳಿಂದಾಗಿ ಇಂದಿಗೂ ಈ ಭಾಗವು ಹಿಂದುಳಿದ್ದು, ಬಡತನ, ನಿರಕ್ಷರತೆ, ತಾಂಡವವಾಡುತ್ತಿದೆ. ಸಾರಿಗೆ ಸಂಪರ್ಕ, ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಭಾರಿ ಹಿನ್ನಡೆಯಾಗಿ ಜನಜೀವನ ಮಟ್ಟ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆ ಕಂಡಿಲ್ಲ. ಸಾಮಾಜಿಕ–ಆರ್ಥಿಕ ಅಸಮಾನತೆ, ಶೋಷಣೆ, ಉದ್ಯೋಗ ಮತ್ತು ಅಭಿವೃದ್ಧಿಯಿಂದ ವಂಚನೆಗೆ ಒಳಗಾಗಿ, ಬಡವರು ಮತ್ತು ಶ್ರೀಮಂತರ ನಡುವೆ ಅಂತರ ಹೆಚ್ಚಲು ಕಾರಣವಾಯಿತು.

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶೇಕಡ 80ಕ್ಕೂ ಹೆಚ್ಚು ಕುಟುಂಬಗಳು ಬಡತನ ರೇಖೆಗಿಂತ ಕೆಳಮಟ್ಟದಲ್ಲಿವೆ. ಶೇಕಡ 50ರಷ್ಟು ಅಸುರಕ್ಷಿತ ಹೆರಿಗೆಗಳು, ಶೇಕಡ 67 ರಷ್ಟು ಮಕ್ಕಳಲ್ಲಿ ಅಪೌಷ್ಟಿಕತೆ, ಶೇಕಡ 44 ರಷ್ಟು ಕುಟುಂಬಗಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯವಿಲ್ಲದಿರುವುದು, 6–14 ವಯೋಮಿತಿಯ ಶೇಕಡ 21 ರಷ್ಟು ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಅಲ್ಲದೇ ಗಂಡು ಮತ್ತು ಹೆಣ್ಣು ಮಕ್ಕಳ ಸಾಕ್ಷರತೆಯ ಮಧ್ಯೆ ಶೇಕಡ 25ರಷ್ಟು ಅಂತರ ಕಂಡು ಬರುತ್ತದೆ. ಇಂದಿಗೂ ಈ ಭಾಗದ ಜಿಲ್ಲೆಗಳಲ್ಲಿ ಶಿಶು ಮರಣ ದರ ಹೆಚ್ಚಿದೆ. ಫ್ಲೋರೈಡ್‌ಯುಕ್ತ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ.

ಅಪೌಷ್ಟಿಕತೆಯಿಂದ ಬಳಲುವ ಮಕ್ಕಳ ಸಂಖ್ಯೆಯೂ ಹೆಚ್ಚಿದೆ. ಕುಡಿಯುವ ನೀರು, ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆ ಮತ್ತು ಹದಗೆಟ್ಟಿರುವ ರಸ್ತೆಗಳು ಈ ಭಾಗದ ಜಿಲ್ಲೆಗಳ ಜನರನ್ನು ಕಾಡುವ ಪ್ರಮುಖ ಸಮಸ್ಯೆಗಳಾಗಿವೆ. ಹಲವು ದಶಕಗಳಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶ ಹತ್ತಾರು ಸಮಸ್ಯೆಗಳ ಆಗರವಾಗಿದೆ. ಪ್ರಾದೇಶಿಕ ಅಸಮತೋಲನ ಗುರುತಿಸಲು ರಚಿಸಲಾಗಿದ್ದ ಡಾ.ಡಿ.ಎಂ.ನಂಜುಂಡಪ್ಪ ವರದಿಯಂತೆ ರಾಜ್ಯದಲ್ಲಿ ಒಟ್ಟು 39 ತಾಲ್ಲೂಕುಗಳು ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿದ್ದು ಈ ಪೈಕಿ 21 ತಾಲ್ಲೂಕುಗಳು ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿವೆ.

ಈ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಿ ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ರಾಜ್ಯದ ಮನವಿಗೆ ಸ್ಪಂದಿಸಿದ ಕೇಂದ್ರ ಸರ್ಕಾರವು ಸಂವಿಧಾನದ 371(ಜೆ) ಕಲಂನ ಅಡಿಯಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದತ್ತವಾದ ವಿಶೇಷ ಸ್ಥಾನಮಾನವನ್ನು ನೀಡಿದೆ. ಈ ಸಂಬಂಧದ ಗೆಜೆಟ್ ಅಧಿಸೂಚನೆಗೆ ರಾಜ್ಯಪಾಲರ ಅಂಕಿತದೊಂದಿಗೆ ಸಂವಿಧಾನದ 371 (ಜೆ) ಕಲಂ ತಿದ್ದುಪಡಿಯ ಅನುಷ್ಠಾನದ ಸಂಬಂಧ ರಾಜ್ಯ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ.

ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸ್ಥಾಪನೆ ಕುರಿತ ಅಧಿಸೂಚನೆಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಇದರಿಂದಾಗಿ ಈ ಸಂಬಂಧದ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು ಇದೀಗ ಈ ಭಾಗದ ಅಭಿವೃದ್ಧಿಯ ಹೊಸ ಶಕೆ ಆರಂಭವಾಗಲಿದೆ.

**ಹೈದರಾಬಾದ್ ಕರ್ನಾಟಕಕ್ಕೆ ಸಿಗಲಿರುವ ಪ್ರಯೋಜನಗಳು – ಮುಂದಿನ ಸಂಚಿಕೆಯಲ್ಲಿ........**

# ವಾರ್ತಾ ವಿಶೇಷ

ಶ್ರೀ ಕ್ಲೆಮೆಂಟ್ ಫೆರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್

## ಪೌಷ್ಠಿಕ್ ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮ ಹಾಗೂ ತರಬೇತಿ :



ಪೌಷ್ಠಿಕ್ (ಉತ್ತರ ಕರ್ನಾಟಕದ 174 ಗ್ರಾಮಗಳಲ್ಲಿನ ಮಕ್ಕಳಲ್ಲಿ, ಹದಿಹರೆಯದ ಹೆಣ್ಣುಮಕ್ಕಳಲ್ಲಿ, ಗರ್ಭಿಣಿ ಹಾಗೂ ಎದೆಹಾಲುಣಿಸುವ ತಾಯಂದಿರಲ್ಲಿ ಅಪೌಷ್ಠಿಕತೆಯನ್ನು ನೀಗಿಸುವ ಯೋಜನೆ), ಯೋಜನೆಯ ಪ್ರಗತಿ ಪುನರವಲೋಕನಾ ಕಾರ್ಯಕ್ರಮ ಹಾಗೂ ತರಬೇತಿಯನ್ನು **ಫೆಬ್ರವರಿ 9 ಮತ್ತು 10, 2016** ರಂದು ಕ್ರಾಸ್ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಎಲ್ಲಾ ಪಾಲುದಾರ ಸಂಸ್ಥೆಗಳು ತಮ್ಮ 3 ತಿಂಗಳ ಪ್ರಗತಿ ಸಾಧನೆಯ ವರದಿಯನ್ನು ಮಂಡಿಸಿದರು. ಈ ಕಾರ್ಯಕ್ರಮ ಅನುಷ್ಠಾನ ಮಡುತ್ತಿರುವ ಜಿಲ್ಲೆಗಳಲ್ಲಿ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ ಹಾಗೂ ವಿವಿಧ ಇಲಾಖೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅಂಗನವಾಡಿ ಕೇಂದ್ರ, ಆಶಾ ಕಾರ್ಯಕರ್ತೆಯರು, ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಗ್ರಾಮ ಪಂಚಾಯತು, ಸರಕಾರೇತರ ಸಂಘ ಸಂಸ್ಥೆಗಳು ಹಾಗೂ ಸಮುದಾಯದೊಂದಿಗೆ ಸೌಹಾರ್ಧಯುತ ಬಾಂಧವ್ಯ ಬೆಳೆಸುವಲ್ಲಿ ಪ್ರಗತಿ ಸಾಧಿಸಿದೆ. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ. ಸೆಬಾಸ್ಟಿಯನ್ ಫರ್ನಾಂಡಿಸ್ ಮತ್ತು ಈ ಕಾರ್ಯಕ್ರಮದ ಅಧಿಕಾರಿ ಶ್ರೀಯುತ ವರ್ಗೀಸ್‌ರವರು ಸಹಭಾಗೀ ಸಂಸ್ಥೆಗಳ ಸಾಧನೆಯ ಬಗ್ಗೆ ಪ್ರಶಂಸಿಸಿ ಯೋಜನೆಯ ಮುಂದಿನ ಹಂತಕ್ಕೆ ಮಾರ್ಗದರ್ಶನ ನೀಡಿದರು.

## ಶಿಕ್ಷಣ ಹಕ್ಕು, ಮಕ್ಕಳ ಹಕ್ಕು ಮತ್ತು ಮಾಹಿತಿ ಹಕ್ಕಿನ ಬಗ್ಗೆ ಕಾರ್ಯಾಗಾರ :



ಕರ್ನಾಟಕ ಪ್ರಾಂತ್ಯಕ್ಕೆ ಒಳಪಟ್ಟ ಶಿಕ್ಷಣ ಸಂಸ್ಥೆಗಳ ಮತ್ತು ಸರ್ಕಾರೇತರ ಸಂಸ್ಥೆಗಳ ಮುಖಂಡರನ್ನೊಳಗೊಂಡ ಒಟ್ಟು 78 ಮಂದಿ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಈ ಕಾರ್ಯಗಾರವನ್ನು ಕ್ರಾಸ್ ಸಂಸ್ಥೆಯ ಸಂಪನ್ಮೂಲ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಕಥೋಲಿಕಾ ಧರ್ಮಾಧ್ಯಕ್ಷರ ಮಂಡಳಿಯ ಅಧ್ಯಕ್ಷರು ಮತ್ತು ಬೆಂಗಳೂರು ಮಹಾಧರ್ಮಕ್ಷೇತ್ರದ ಮಹಾಧರ್ಮಾಧ್ಯಕ್ಷರಾದ ಅತೀ ವಂದನೀಯ ಡಾ. ಬೆರ್ನಾರ್ಡ್ ಮೊರಾಸ್, ಅಧ್ಯಕ್ಷತೆ ವಹಿಸಿದ್ದರು. ಪೂಜ್ಯ ಮಹಾಧರ್ಮಾಧ್ಯಕ್ಷರು ತಮ್ಮ ಅಧ್ಯಕ್ಷೀಯ ಬಾಷಣದಲ್ಲಿ, ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿರಬೇಕಾದ ಪಾರದರ್ಶಕತೆ ಮತ್ತು ಮಕ್ಕಳ ಹಕ್ಕುಗಳ ಮಾಹಿತಿ ಸಮಂಜಸವಾಗಿ ಎಲ್ಲ ಮಕ್ಕಳಿಗೆ ನೀಡುವುದು ಎಲ್ಲರ ಕರ್ತವ್ಯವಾಗಿದೆ ಎಂದು ತಿಳಿಹೇಳಿದರು.

ಶಿಕ್ಷಣದ ಹಕ್ಕುಗಳ ಬಗ್ಗೆ ಮಾಹಿತಿಯನ್ನು ಗವಾಹಟಿ ಹೈಕೋರ್ಟಿನ ವಕೀಲರಾದ ಡಾ.ರವಿ ಸಾಗರ್ ಮತ್ತು ಕರ್ನಾಟಕ ಕಥೋಲಿಕಾ ಧರ್ಮಾಧ್ಯಕ್ಷರ ಮಂಡಳಿಯ, ಶಿಕ್ಷಣ ಅಯೋಗದ ಕಾರ್ಯದರ್ಶಿಗಳಾದ ವಂದನೀಯ ಸ್ವಾಮಿ ಡಾ. ಯುವ್ಜಿಜಿನ್ ಲೋಬೊ ರವರು ನೀಡಿದರು. ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿಯನ್ನು ಡಾ. ಸ್ವಾನಿ ಡಿ'ಸೋಜಾ ಮತ್ತು ಇನ್ಸಾ – ಭಾರತ ಇದರ ಕಾರ್ಯಕ್ರಮ ಅಧಿಕಾರಿಗಳಾದ ಕುಮಾರಿ ಶಾರ್ಲೆಟ್‌ರವರು ನಡೆಸಿಕೊಟ್ಟರು. ಮಾಹಿತಿ ಹಕ್ಕುಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಶ್ರೀಯುತ ಮಾರ್ಕ್ ಡಿ'ಸೋಜಾ ಮತ್ತು ವಂದನೀಯ ಸ್ವಾಮಿ ಕ್ಲಿಫೊರ್ಡ್ ಡಿ'ಸೋಜಾರವರು ಕೂಲಂಕುಷವಾಗಿ ವಿವರಿಸಿದರು.

## ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆ :



ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆಯು **ಫೆಬ್ರವರಿ 20, 2016** ರಂದು ಕ್ರಾಸ್ ನಲ್ಲಿ ಜರುಗಿತು. ಈ ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ. ಜೆರಾಲ್ಡ್ ಐಸಾಕ್ ಲೋಬೋ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದ್ದರು. ಮೈಸೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾದ ಅತೀ ಪೂಜ್ಯನೀಯ ಡಾ. ತೋಮಸ್ ಆಂಟೊನಿ ವಾಜಪಿಳ್ಳಿ ಹಾಗೂ ಉಪಾಧ್ಯಕ್ಷರು, ಕ್ರಾಸ್ ಸಂಸ್ಥೆ, ಇವರು ಉಪಸ್ಥಿತರಿದ್ದರು. ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಸಭೆಗೆ ಆಗಮಿಸಿದ ಎಲ್ಲಾ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ಕ್ರಮ ಬದ್ಧವಾಗಿ ನಿರ್ವಹಿಸಿದರು. ಫಾ ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಕ್ರಾಸ್ ಸಂಸ್ಥೆಯ ಕಾರ್ಯದರ್ಶಿಗಳಾಗಿ ನಿರ್ದೇಶಕ ಮಂಡಳಿಯ ಸಭೆಗೆ ಮಾಹಿತಿಯನ್ನು ನೀಡಿದರು.

## ಮೈಸೂರಿನ ಓ.ಡಿ.ಪಿ. ಸಂಸ್ಥೆಯಲ್ಲಿ ಉತ್ತಮ ಆಡಳಿತದ ಬಗ್ಗೆ ಕಾರ್ಯಾಗಾರ :



ಮೈಸೂರಿನಲ್ಲಿ ಫೆಬ್ರವರಿ 23, 2016ರಂದು ಕ್ರಾಸ್ ಸಂಸ್ಥೆ, ಬೆಂಗಳೂರು ಇದರ ಸಹಯೋಗದೊಂದಿಗೆ, ಮೈಸೂರಿನ ಓ.ಡಿ.ಪಿ ಸಂಸ್ಥೆಯ ಪ್ರಗತಿ, ತರಬೇತಿ ಕೇಂದ್ರದಲ್ಲಿ ಉತ್ತಮ ಆಡಳಿತದ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು . ಮೈಸೂರಿನ ಓ.ಡಿ.ಪಿ ಮತ್ತು ಮಂಡ್ಯ ಜ್ಞಾನವಿಕಾಸ ಸಂಸ್ಥೆಗಳ ಸಂಯೋಜಕರು, ಕಾರ್ಯಕರ್ತೆಯರು, ಸ್ವಸಹಾಯ ಸಂಘದ ಪದಾಧಿಕಾರಿಗಳು, ಗ್ರಾಮಪಂಚಾಯತಿಯಲ್ಲಿ ಸ್ಪರ್ಧಿಸಿದವರು ಭಾಗವಹಿಸಿದ್ದ ಈ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಯುತ ವರ್ಗೀಸ್ ಕ್ರಾಸ್ ಸಂಸ್ಥೆ, ಬೆಂಗಳೂರು ಹಾಗು ಓ.ಡಿ.ಪಿ. ಸಂಸ್ಥೆಯ ಶ್ರೀಮತಿ ಯಮುನಾ ಮತ್ತು ಶ್ರೀಮತಿ ಸುನಿತಾರವರು

ನಡೆಸಿಕೊಟ್ಟರು. ಸ್ಥಳೀಯ ಸರಕಾರಗಳ ಅಧಿಕಾರ, ಕಾರ್ಯಕ್ಷಮತೆ ಜನಭಾಗವಹಿಸುವಿಕೆ, ಉತ್ತಮ ಆಡಳಿತದ ಅವಶ್ಯಕತೆ, ಮಾಹಿತಿ ಪಡೆಯುವ ಅವಕಾಶ, ಹಕ್ಕುಗಳ ಬಗ್ಗೆ ತಿಳುವಳಿಕೆ, ಸರಕಾರಿ ಕಛೇರಿಗಳಲ್ಲಿ ಲಭ್ಯವಿರಬೇಕಾದ ಮಾಹಿತಿಯ ತಿಳುವಳಿಕೆಯನ್ನು ಸಂಕ್ಷಿಪ್ತವಾಗಿ ವಿವರಿಸಲಾಯಿತು. ಓ.ಡಿ.ಪಿ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸ್ವಾನಿ ಅಲ್ಮೇಡಾ ಮತ್ತು ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಉತ್ತಮ ಆಡಳಿತದ ಬಗ್ಗೆ ಕೆಲವು ಜ್ವಲಂತ ವಿವರಣೆಯ ಮೂಲಕ ಮಾಹಿತಿಯನ್ನು ನೀಡಿದರು.

**ಕ್ರಾಸ್ ಸಂಸ್ಥೆಯ ಹೊಸ ಮಹಿಳಾಭಿವೃದ್ಧಿ ಯೋಜನೆಯ ಔಪಚಾರಿಕ ಉದ್ಘಾಟನೆ ಮತ್ತು ಲೋಕಾರ್ಪಣೆ :**

ಮಹಿಳಾಭಿವೃದ್ಧಿ ಮುಂದಿನ ಹಂತದ (2016–2018)ಯೋಜನೆಯ ಉದ್ಘಾಟನೆಯನ್ನು ಮಾರ್ಚ್ 9, 2016 ರಂದು ಕ್ರಾಸ್ ಸಂಸ್ಥೆಯಲ್ಲಿ ನೆರವೇರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಅತೀ ವಂದನೀಯ ಡಾ. ರೋಬರ್ಟ್ ಮಿರಾಂಡ, ಗುಲಬರ್ಗ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷರು, ಹಾಜರಿದ್ದ 14 ಪಾಲುದಾರ ಸಂಸ್ಥೆಗಳ ಸಂಯೋಜಕರು ಮತ್ತು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ, ಮುಖ್ಯವಾಹಿನಿಯಿಂದ ದೂರ ಸರಿಸಲ್ಪಟ್ಟ, ಸಮಾಜದ ಅಂಚಿಗೆ ತಳ್ಳಲ್ಪಟ್ಟ ಮಹಿಳಾ ವರ್ಗಕ್ಕೆ ಸಾಮಾಜಿಕ ನ್ಯಾಯ ಒದಗಿಸಿ ಎಂದು ಪ್ರೇರಣೆ ನೀಡಿದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ನೂತನ ಯೋಜನೆಯ ಗುರಿ, ಉದ್ದೇಶ, ಸಾಧಿಸಬೇಕಾದ ಫಲಿತಾಂಶ, ಫಲಿತಾಂಶ ಸಾಧಿಸಲು ಕೈಗೊಳ್ಳಬೇಕಾದ ಚಟುವಟಿಕೆಗಳು, ಪಾಲುದಾರ ಸಂಸ್ಥೆಗಳ ಉತ್ತರದಾಯಿತ್ವಗಳ ಬಗ್ಗೆ ವಿವರಿಸಿದರು.



ಮಹಿಳಾಭಿವೃದ್ಧಿ ಕಾರ್ಯಕ್ರಮದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಶಿಬಿರವು ಮಾರ್ಚ್ 9–10, 2016 ರಂದು ಕ್ರಾಸ್ ಸಂಸ್ಥೆಯ ಸಂಪನ್ಮೂಲ ಕೇಂದ್ರದಲ್ಲಿ ನಡೆಯಿತು. 14 ಪಾಲುದಾರ ಸಂಸ್ಥೆಗಳ 45 ಪ್ರತಿನಿಧಿಗಳು ಭಾಗವಹಿಸಿದ್ದರು. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕಳೆದ 3 ತಿಂಗಳಲ್ಲಿ ನಿರ್ವಹಿಸಿದ ಅಭಿವೃದ್ಧಿ ಸಾಧನೆಗಳ ಬಗ್ಗೆ ಸಂಕ್ಷಿಪ್ತವಾಗಿ ಮಂಡಿಸಿದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಸಂಯೋಜಕರ ಕಾರ್ಯ ವೈಖರಿ ಹಾಗು ಮಹಿಳಾಭಿವೃದ್ಧಿಯಲ್ಲಿನ ಸಾಧನೆಗಳನ್ನು ಅಭಿನಂದಿಸಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಕ್ರಾಸ್ ಸಂಸ್ಥೆಯ ಸಂಯೋಜಕರುಗಳಾದ ಸಿಸ್ಟರ್ ನಾನ್ಸಿ ಲೋಬೊ ಮತ್ತು ಸಿಸ್ಟರ್ ಲೂಸಿಯ ಸೆಬಾಸ್ಟಿಯನ್ ರವರು ವ್ಯವಸ್ಥಿತವಾಗಿ ನಿರ್ವಹಿಸಿ ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

**ಉತ್ತಮ ಆಡಳಿತ – ಕಾರ್ಯಾಗಾರ :**

ಕ್ರಾಸ್ ಸಂಸ್ಥೆಯ ಎಲ್ಲಾ ಪಾಲುದಾರ ಸಂಸ್ಥೆಯ ಸಿಬ್ಬಂಧಿಗಳಿಗೆ ಮಾರ್ಚ್ 11, 2016ರಂದು ಕ್ರಾಸ್ ಸಂಸ್ಥೆಯ ಸಂಪನ್ಮೂಲ ಕೇಂದ್ರದಲ್ಲಿ ಉತ್ತಮ ಆಡಳಿತದ ಕುರಿತು ಒಂದು ದಿನದ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫೆರ್ನಾಂಡಿಸ್‌ರವರು ಭಾಗವಹಿಸಿದವರನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರಸ್ತುತ ದಿನಗಳಲ್ಲಿ ಉತ್ತಮ ಆಡಳಿತ ನಮಗೆ ಯಾಕೆ ಬೇಕು. ಉತ್ತಮ ಆಡಳಿತ ಬಲಪಡಿಸಲು ಇರುವ ಅವಕಾಶಗಳನ್ನು ಹೇಗೆ ಉಪಯೋಗಪಡಿಸುವುದು ಎಂಬ ಬಗ್ಗೆ ಪ್ರಾಸ್ತಾವಿಕವಾಗಿ ಮಾಹಿತಿ ನೀಡಿದರು.



ಕಾರ್ಯಾಗಾರದ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರಿಯುತ ಅಡ್ಡೂರು ಕೃಷ್ಣರಾವ್‌ರವರು ಉತ್ತಮ ಆಡಳಿತಕ್ಕಿರುವ ಕಾಯ್ದೆಗಳು, ಸರಕಾರ ಕಾಲಾನುಸಾರ ಮಾಡಿದ ತಿದ್ದುಪಡಿಗಳು, ಮಾಹಿತಿ ಹಕ್ಕು, ಲಭ್ಯವಿರುವ ಮಾಹಿತಿಗಳನ್ನು ಕಲೆಹಾಕುವ ರೀತಿ, ಗ್ರಾಹಕ ರಕ್ಷಣಾ ಕಾಯ್ದೆ, ಸಕಾಲ ಮತ್ತು ಉತ್ತಮ ಆಡಳಿತದ ನೈಜಕತೆಯ ಬಗ್ಗೆ ಕೂಲಂಕುಷವಾಗಿ ವಿವರಿಸಿದರು. ಶ್ರೀಯುತ ವರ್ಗೀಸ್ ಜಿ.ಎಂ. ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು ನಿರೂಪಿಸಿದರು.

MISEREOR
IHR HILFSWERK

ಪ್ರತಿಗಳಿಗಾಗಿ ಸಂಪರ್ಕಿಸಿ :

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ, ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com

ವೆಬ್‌ಸೈಟ್ : www.krossbangalore.com